**OS.No.**25/2019
**ಪಿ ಡಬ್ಲ್ಯೂಃ1**

**ದಿಃ 24-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈ.ಎಂ ಆರ್ 8 ರಿಂದ 10 ನೇ ಪ್ರತಿವಾದಿಗಳ ಪರ ವಕೀಲರಿಂದ**

ನನ್ನ ಅಜ್ಜ ಹನುಮಂತಪ್ಪರವರಿಗೆ 5 ಜನ ಮಕ್ಕಳು. ಅವರಲ್ಲಿ ಮೂರು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನನ್ನ ತಂದೆಯ ಹೆಸರು ಬಸವರಾಜಪ್ಪ. ನನ್ನ ಅಜ್ಜ ಹನುಮಂತಪ್ಪರವರ ಜೀವಿತಾವಧಿಯಲ್ಲಿ ಅವರ ಆಸ್ತಿಗಳನ್ನು ಅವರ ಮೂರು ಜನ ಗಂಡು ಮಕ್ಕಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ, ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪರು ಒಟ್ಟು ಕುಟುಂಬದ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಕ್ರಮ ಸಂಖ್ಯೆ 1 ರಿಂದ 4 ರ ಅನುಸೂಚಿ ಆಸ್ತಿಗಳನ್ನು ಪ್ರತಿವಾದಿ ನಂ 8 ಮತ್ತು 9 ರವರು ತಮ್ಮ ಪ್ರತಿವಾದ ಪತ್ರದ ಕಂಡಿಕೆ 14 ಮತ್ತು 15 ರಲ್ಲಿ ವಿವರಿಸಿದಂತೆ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

ದಾವಾ ಕ್ರಮ ಸಂಖ್ಯೆ 5 ರ ಅನುಸೂಚಿ ಆಸ್ತಿಯಲ್ಲಿ ನಮ್ಮ ಕುಟುಂಬದ ಹಿರಿಯರ ಸಮಾಧಿಗಳು ಇವೆ ಎಂದರೆ ಸರಿ. ದಾವಾ ಕ್ರಮ ಸಂಖ್ಯೆ 5 ರ ಅನುಸೂಚಿ ಆಸ್ತಿಯಲ್ಲಿ ಯಾವುದೇ ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ದಾವಾ ಕ್ರಮ ಸಂಖ್ಯೆ 6 ರಿಂದ 10 ರ ಆಸ್ತಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಿದ್ದು ಆ ಪೈಕಿ ದಕ್ಷಿಣ ಭಾಗದ 3 ಎಕರೆ 12 ವರೆ ಗುಂಟೆ ಆಸ್ತಿಗಳನ್ನು ನನ್ನ ತಂದೆಯ ಭಾಗಕ್ಕೆ ಮತ್ತು ಉತ್ತರದ ಭಾಗದ 3 ಎಕರೆ 6 ಗುಂಟೆ ಜಮೀನು ಆಸ್ತಿಯನ್ನು ನನ್ನ ದೊಡ್ಡಪ್ಪ ಗಂಗಾಧರಪ್ಪರವರ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ದಾವಾ ಕ್ರಮ ಸಂಖ್ಯೆ 11 ರ ಅನುಸೂಚಿ ಆಸ್ತಿಯು ಯಾರ ಹೆಸರಿಗೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ನನ್ನ ತಂದೆಯವರ ಅಕ್ಕನವರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂಖ್ಯೆ 14 ರ ಅನುಸೂಚಿ ಆಸ್ತಿಯನ್ನು ಸ್ವತಂತ್ರವಾಗಿ ಕ್ರಯಕ್ಕೆ ಕೊಂಡ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಕ್ರಮ ಸಂಖ್ಯೆ 11 ಮತ್ತು 14 ರ ಅನುಸೂಚಿ ಆಸ್ತಿಗಳು ಒಟ್ಟು

ಕುಟುಂಬದ ಆಸ್ತಿ ಎಂದರೆ ಇರಬಹುದು. ದಾವಾ ಕ್ರಮ ಸಂಖ್ಯೆ 13 ರ ಅನುಸೂಚಿ ಆಸ್ತಿಯ ದಾಖಲೆ 10 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ.

ಸಾಕ್ಷಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸದೇ ಇದ್ದ ಕಾರಣ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

**ಮರು ವಿಚಾರಣೆ ಇಲ್ಲ:-**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.